ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ನಿಷ್ಠಾ/ಪ್ರಾ.ಶಾ.ಶಿ.ತ/05/2020-21 ದಿನಾಂಕ 29.10.2020

# ಸುತ್ತೋಲೆ

**ವಿಷಯ : ನಿಷ್ಠಾ ಆನ್‌ಲೈನ್ ತರಬೇತಿಯನ್ನು ದಿನಾಂಕ 03.11.2020 ರಿಂದ ಅನುಷ್ಠಾನಗೊಳಿಸುವ ಬಗ್ಗೆ.**

ಉಲ್ಲೇಖ : 1. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 13.10.2020
2. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ 15.10.2020
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ : 13644/ಸ.ಶಿ.ಕ/ತ/ ಪ್ರಾ.ಶಿ/ನಿಷ್ಠಾ/2020-21 ದಿ:20.10.2020

****

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 1 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ನಿಷ್ಠಾ ಆನ್‌ಲೈನ್ ತರಬೇತಿಯನ್ನು ದಿನಾಂಕ 03.11.2020 ರಿಂದ ಅನುಷ್ಠಾನಗೊಳಿಸಲು ಹಾಗೂ ಅಗತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಉಲ್ಲೇಖ 02 ರ ಪತ್ರದಲ್ಲಿ ಕೋರ್ಸ್‌ನ ಷಡ್ಯೂಲ್‌ನೊಂದಿಗೆ ತಿಳಿಸಲಾಗಿದೆ.

ಉಲ್ಲೇಖ 01 ರಲ್ಲಿ ವಿವಿಧ ಹಂತದ ಅಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ಮತ್ತು ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ವಿವರವಾದ ಮಾಹಿತಿಯನ್ನು ನೀಡಲಾಗಿದೆ. ವಿಡಿಯೋ ಕಾನ್ಫರೆನ್ಸ್‌ನಲ್ಲಿ ಪೂರ್ಣ ಇದರ ಮಾಹಿತಿ ಹಂಚಿಕೆ ಮಾಡಲಾಗಿದೆ. ಉಲ್ಲೇಖ 03 ರಲ್ಲಿ 2020-21ನೇ ಸಾಲಿನ PAB ಸೂಚನೆಗಳನ್ವಯ **ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆನ್‌ಲೈನ್ ಮೂಲಕ ನಿಷ್ಠಾ ಆನ್‌ಲೈನ್ ತರಬೇತಿ ನೀಡಲು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ತಿಳಿಸಿರುತ್ತಾರೆ.**

ಎಸ್.ಎಸ್.ಕೆ ಕಛೇರಿಯಿಂದ ಪ್ರತಿ ಜಿಲ್ಲೆಗೆ ನಿಗಧಿಪಡಿಸಿರುವ ಗುರಿಯ ಪಟ್ಟಿಯನ್ನು **ಅನುಬಂಧ-01** ರಲ್ಲಿ ನೀಡಲಾಗಿದೆ ಅದರಂತೆ **ದಿನಾಂಕ 03.11.2020 ರಿಂದ ನಿಷ್ಠಾ ಆನ್‌ಲೈನ್ ತರಬೇತಿಯನ್ನು ನೀಡಲು ತಿಳಿಸಲಾಗಿದೆ.**

ಈ ಕೋರ್ಸ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಶಿಕ್ಷಕರಿಗೆ ಎಸ್.ಎಸ್.ಕೆ ಕಛೇರಿಯಿಂದ ಅನುದಾನದ ಬ್ರೇಕ್‌ಅಪ್ ಬಗ್ಗೆ ನಿರ್ದೇಶನ ಬಂದ ಕೂಡಲೆ ಡಯಟ್‌ಗಳ ಮೂಲಕ ಹಣ ಬಿಡುಗಡೆ ಮಾಡಲಾಗುವುದು.

## ನಿಷ್ಠಾ ಆನ್‌ಲೈನ್ ತರಬೇತಿಯನ್ನು ಯಶಸ್ವಿಗೊಳಿಸಲು ಸೂಚನೆಗಳು

1. ವಿವಿಧ ಹಂತದ ಅಧಿಕಾರಿಗಳು/ಸಿಬ್ಬಂದಿ ತಮಗೆ ವಹಿಸಿರುವ ಪಾತ್ರ ಮತ್ತು ಜವಾಬ್ದಾರಿಗಳನ್ನು ಕಾಲ ವಿಳಂಬಮಾಡದಂತೆ ನಿರ್ವಹಿಸುವುದು.**(ಅನುಬಂಧ-02)**
2. ಪ್ರತಿ 15 ದಿನಗಳಿಗೊಮ್ಮೆ ಬ್ಲಾಕ್ ಮತ್ತು ಜಿಲ್ಲಾ ಹಾಗೂ ವಿಭಾಗ ಹಂತದ ಅನುಷ್ಠಾನ ಮತ್ತು ತಾಂತ್ರಿಕ ತಂಡ ಸಮಿತಿಯ ಸಭೆ ನಡೆಸಿ ಸಮಸ್ಯೆಗಳ ಬಗ್ಗೆ ಮತ್ತು ಯಶೋಗಾಥೆಗಳ ಬಗ್ಗೆ ಚರ್ಚಿಸಿ ಶಿಕ್ಷಕರಿಗೆ ಅಗತ್ಯ ಬೆಂಬಲ ನೀಡುವುದು.
3. ಪ್ರತಿ ಕೋರ್ಸ್‌ವಾರು ಪ್ರಗತಿಯನ್ನು ನಿಗಧಿತ ವೇಳೆಯಲ್ಲಿ ಬ್ಲಾಕ್‌ನಿಂದ ಜಿಲ್ಲೆಗೆ, ಜಿಲ್ಲೆಯಿಂದ ವಿಭಾಗಕ್ಕೆ, ವಿಭಾಗದಿಂದ ಡಿ.ಎಸ್.ಇ.ಆರ್.ಟಿಗೆ ಸಲ್ಲಿಸುವುದು.
4. ಎಲ್ಲಾ ಸರ್ಕಾರಿ ಶಾಲಾ ಪ್ರಾಥಮಿಕ ಹಂತದ ಶಿಕ್ಷಕರುಗಳು ಈ ತರಬೇತಿ ಹೊಂದುವಂತೆ ಅಗತ್ಯ ಕ್ರಮವಹಿಸುವುದು.

5. ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನಿಷ್ಠಾ ಕೋರ್ಸ್‌ಗಳು ಲಭ್ಯವಿದ್ದು ಶಿಕ್ಷಕರು ಇಚ್ಚಿಸುವ ಮಾಧ್ಯಮದಲ್ಲಿ ತರಬೇತಿ ಹೊಂದಲು ಅವಕಾಶ ಕಲ್ಪಿಸುವುದು. ಉರ್ದು, ಮರಾಠಿ, ತೆಲುಗು, ತಮಿಳು ಮಾಧ್ಯಮದಲ್ಲಿ ಕೋರ್ಸ್‌ಗಳನ್ನು ನೀಡಲು ಎನ್.ಸಿ.ಇಆರ್.ಟಿಯನ್ನು ಕೋರಲಾಗಿದ್ದು ಪ್ರಸ್ತುತ ಈ ಮಾಧ್ಯಮದ ಶಿಕ್ಷಕರು ಇಂಗ್ಲೀಷ್/ಕನ್ನಡ ಮಾಧ್ಯಮದ ಕೋರ್ಸ್‌ಗಳನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಿಸುವುದು. ಸ್ಥಳೀಯವಾಗಿ ಆ ಮಾಧ್ಯಮದಲ್ಲಿ ಪೂರಕವಾಗಿ ಚಿಕ್ಕ ಚಿಕ್ಕ ವೀಡಿಯೋ, ಬರಹಗಳು, ಲೈವ್ ವೆಬಿನಾರ್, ಯೂಟ್ಯೂಬ್ ತರಗತಿಗಳನ್ನು ಆಯೋಜಿಸಿ ಶಿಕ್ಷಕರಿಗೆ ಕೋರ್ಸ್ ಪೂರ್ಣಗೊಳಿಸಲು ಅಗತ್ಯ ಬೆಂಬಲ ನೀಡುವುದು.

6. 15 ದಿನಗಳಿಗೆ 03 ಕೋರ್ಸ್‌ಗಳಂತೆ ಪೂರ್ಣಗೊಳಿಸಬೇಕಿದ್ದು ಆ ಅವಧಿಯಲ್ಲೇ ಎಲ್ಲಾ ಶಿಕ್ಷಕರು ಸದರಿ ಕೋರ್ಸ್‌ಗಳನ್ನು ಪೂರ್ಣಗೊಳಿಸಲು ಶಿಕ್ಷಕರಿಗೆ ತಿಳಿಸುವುದು. ಈ ಅವಧಿಯಲ್ಲಿ KRP & SRP-L ರವರಿಂದ ಪ್ರತಿ ಮಾಡ್ಯೂಲ್‌ಗೆ ಸಂಬಂಧಿಸಿದಂತೆ ವೆಬಿನಾರ್, ಯೂಟ್ಯೂಬ್ ಲೈವ್ ತರಗತಿಗಳು, ಟಿ-ಕಾನ್‌ಗಳು, ಗೂಗಲ್ ಮೀಟ್, ವೆಬೆಕ್ಸ್ ಇತ್ಯಾದಿ ಮಾಧ್ಯಮಗಳ ಮೂಲಕ ಅಗತ್ಯ ಬೆಂಬಲ ಆಧಾರಿತ ತರಗತಿಗಳನ್ನು ಆಯೋಜಿಸುವುದು. ಇದಕ್ಕೆ ಡಯಟ್ ಮತ್ತು ಬ್ಲಾಕ್‌ಗಳು ಜೊತೆಗೂಡಿ ಅನುಷ್ಠಾನಗೊಳಿಸುವುದು.

8. ಎಲ್ಲಾ ಶಿಕ್ಷಕರು 18 ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಅಂತ್ಯದಲ್ಲಿ ಅಸೆಸ್‌ಮೆಂಟ್ ಪೂರ್ಣಗೊಳಿಸಿದ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

9. ಹೊಸ ಶಿಕ್ಷಕರ ಸೇರ್ಪಡೆ/ದೂರವಾಣಿ ಸಂಖ್ಯೆ ಬದಲಾವಣೆ ಇತ್ಯಾದಿ ಶಿಕ್ಷಕರ ಪ್ರೊಫೈಲ್‌ನ ಅಂಶಗಳನ್ನು EEDS ತಂತ್ರಾಂಶಕ್ಕೆ ಸಂಯೋಜಿಸಿಕೊಳ್ಳುವುದು. ಈ ಕಾರ್ಯವನ್ನು BEO & DDPI (ಆಡಳಿತ) ರವರು ತುರ್ತಾಗಿ ಅಗತ್ಯ ಕ್ರಮ ವಹಿಸುವುದು. ಇದಕ್ಕೆ ತಮ್ಮ ಕಛೇರಿಯ ಕಂಪ್ಯೂಟರ್ ಪ್ರೋಗ್ರಾಮರ್‌ಗಳನ್ನು ಬಳಸಿಕೊಳ್ಳುವುದು.

**10. ರಾಜ್ಯದ ಎಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು (ಆಡಳಿತ) ರವರು ಉಪನಿರ್ದೇಶಕರು (ಅಭಿವೃದ್ಧಿ) ರವರ ಜೊತೆಗೂಡಿ ಕಾಲಕಾಲಕ್ಕೆ ಶಿಕ್ಷಕರ ತರಬೇತಿ ಪ್ರಗತಿ ದೃಢೀಕರಿಸಿ ಸಂಬಂಧಿಸಿದ ಸಿ.ಟಿ.ಇಗಳಿಗೆ ಸಲ್ಲಿಸುವುದು (ಬೆಂಗಳೂರು ಮತ್ತು ಕಲ್ಬುರ್ಗಿ ವಿಭಾಗದವರು ಸಿಟಿಇ ಚಿತ್ರದುರ್ಗಕ್ಕೆ, ಮೈಸೂರು ಮತ್ತು ಬೆಳಗಾಂ ವಿಭಾಗದವರು ಸಿ.ಟಿ.ಇ ಮೈಸೂರು ವಿಭಾಗಕ್ಕೆ ಸಲ್ಲಿಸುವುದು. ಇ-ಮೇಲ್ ವಿಳಾಸ (ಸಿ.ಟಿ.ಇ ಮೈಸೂರು-cte.mysore@gmail.com , ಸಿ.ಟಿ.ಇಚಿತ್ರದುರ್ಗ- cte.chitradurga@gmail.com)**

11. ಡಯಟ್ ಪ್ರಾಂಶುಪಾಲರು ಗುಣಾತ್ಮಕ ತರಬೇತಿಗೆ ಸಂಬಂಧಿಸಿದಂತೆ ಸಭೆಗಳ ಆಯೋಜನೆ, ವಿವಿಧ ಮಾಧ್ಯಮಗಳ ಮೂಲಕ ಆನ್‌ಲೈನ್ ತರಗತಿಗಳ ಆಯೋಜನೆ ಮುಂತಾದ ಕ್ರಮಗಳನ್ನು ಕೈಗೊಂಡು ತಮ್ಮ ಜಿಲ್ಲೆಯ ಪ್ರಗತಿ ಸಾಧಿಸಲು ಕ್ರಮವಹಿಸುವುದು. ಜಿಲ್ಲಾ ಹಂತದ ತಾಂತ್ರಿಕ ಮತ್ತು ಅನುಷ್ಠಾನ ಸಮಿತಿಯ ಸಭೆ ನಡೆಸಿ ತರಬೇತಿ ವರದಿ ಸಿದ್ಧಪಡಿಸುವುದು ಮತ್ತು KRP & SRP-L ರವರಿಗೆ ಈ ಕಾರ್ಯದಲ್ಲಿ ಅಗತ್ಯ ಬೆಂಬಲ ನೀಡುವುದು.

**12. ಸಿ.ಟಿ.ಇ ಚಿತ್ರದುರ್ಗ ಮತ್ತು ಸಿ.ಟಿ.ಇ ಮೈಸೂರು ರವರು ತಮಗೆ ವಹಿಸಿದ ವಿಭಾಗಗಳ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರನ್ನು ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಆನ್‌ಲೈನ್ ತರಬೇತಿಯ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುವುದು. ವಿಭಾಗ ಹಂತದಲ್ಲಿ ಶೈಕ್ಷಣಿಕ ಮತ್ತು ತಾಂತ್ರಿಕ ಬೆಂಬಲವನ್ನು ಸಂಬಂಧಿಸಿದ ಜಿಲ್ಲೆಗಳಿಗೆ ನೀಡುವುದು. ಜಿಲ್ಲಾವಾರು ತರಬೇತಿಯ ಪ್ರಗತಿಯನ್ನು ನಿಯತಕಾಲಿಕವಾಗಿ ಸಂಗ್ರಹಿಸಿ ಕ್ರೋಢೀಕರಿಸಿ ಡಿ.ಎಸ್.ಇ.ಆರ್.ಟಿಗೆ ಪ್ರತಿ ತಿಂಗಳು 5 ಮತ್ತು 20ನೇ ತಾರೀಖು ಸಲ್ಲಿಸುವುದು.**

13. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯಿಂದ EEDS ತಂತ್ರಾಂಶದ ಡೇಟಾದಿಂದ Single SIgn On(SSO) ಮೂಲಕ ದೀಕ್ಷಾದಲ್ಲಿ ಲಾಗಿನ್ ಆಗಿ ನಿಷ್ಠಾ ಆನ್‌ಲೈನ್ ಕೋರ್ಸ್ ತೆಗೆದುಕೊಳ್ಳುವ ಬಗ್ಗೆ ತಂತ್ರಾಂಶ ಅಭಿವೃದ್ಧಿಪಡಿಸಿರುತ್ತಾರೆ. ಶಿಕ್ಷಕರು ಲಾಗಿನ್ ಆಗಿ ಕೋರ್ಸ್ ಪೂರ್ಣಗೊಳಿಸುವ ಬಗ್ಗೆ Flow chart ನ್ನು ಲಗತ್ತಿಸಿದೆ **(ಅನುಬಂಧ-03)**. ಪ್ರತಿ 15 ದಿನಗಳಿಗೊಮ್ಮೆ 03 ಕೋರ್ಸ್‌ಗಳ ಲಿಂಕನ್ನು ಡಯಟ್‌ಗಳಿಗೆ ಕಳುಹಿಸಲಾಗುತ್ತದೆ ಅದನ್ನು ಶಿಕ್ಷಕರಿಗೆ ನೀಡಿ ನಿಗದಿಪಡಿಸಿದ ಅವಧಿಯಲ್ಲೇ ಕೋರ್ಸ್ ಪೂರ್ಣಗೊಳಿಸಲು ಕ್ರಮವಹಿಸುವುದು.
14. ಪ್ರತಿ 15 ದಿನಗಳಿಗೆ ನಿಗದಿಪಡಿಸಿದ ಕೋರ್ಸ್‌ಗಳ Schedule ನ್ನು ಲಗತ್ತಿಸಿದೆ. **(ಅನುಬಂಧ-04)**
15. ಕೆ.ಆರ್.ಪಿಗಳು ತಮಗೆ ನಿಗಧಿಪಡಿಸಿದ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು. ಈ ಬಗ್ಗೆ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ), ಬಿ.ಇ.ಓ, ಬಿ.ಆರ್.ಸಿ, ರವರು ಕಾಲಕಾಲಕ್ಕೆ ಸೂಚನೆ ಮತ್ತು ಅಗತ್ಯ ಬೆಂಬಲ ನೀಡಲು ಕ್ರಮವಹಿಸುವುದು. ಬ್ಲಾಕ್ ಹಂತದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಬ್ಲಾಕ್ ಅನುಷ್ಠಾನ ಮತ್ತು ತಾಂತ್ರಿಕ ಸಮಿತಿ ಸಭೆ ನಡೆಸಿ ಶಿಕ್ಷಕರಿಗೆ ಆನ್‌ಲೈನ್ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸುವುದು.

(ಎಂ.ಆರ್.ಮಾರುತಿ)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

ಗೆ,

1. ಪ್ರಾಂಶುಪಾಲರು ಹಾಗೂ ನಿಷ್ಠಾ ನೋಡಲ್ ಅಧಿಕಾರಿಗಳು ಸಿಟಿಇ ಚಿತ್ರದುರ್ಗ ಮತ್ತು ಸಿ.ಟಿ.ಇ ಮೈಸೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಇವರಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಡಯಟ್‌ನ ನಿಷ್ಠಾ ನೋಡಲ್ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
6. ರಾಜ್ಯದ ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು SRP-L ಇವರಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾ.ಶಿ.ಇ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಧಾರವಾಡ ಮತ್ತು ಕಲ್ಬುರ್ಗಿ ವಿಭಾಗರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.
5. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ಅನುಬಂಧ-01

# 2020-21 NISHTHA TEACHERS TRAINING ( 1 to 8) PHYSICAL TARGET

| Sl | District | No. of teachers who teach classes 1 & 3 | No. of teachers who teach classes 4 & 5 | No. of teachers who teach classes 6 to 8 | Total Phy ( 1 to 8) |
|---|---|---|---|---|---|
| 1 | BAGALKOTE | 2093 | 1606 | 2304 | 6003 |
| 2 | BALLARI | 2227 | 1647 | 2294 | 6168 |
| 3 | BELAGAVI | 2281 | 1734 | 2368 | 6383 |
| 4 | BENGALURU NORTH | 822 | 650 | 810 | 2282 |
| 5 | BENGALURU RURAL | 1207 | 926 | 791 | 2924 |
| 6 | BENGALURU SOUTH | 1304 | 985 | 1154 | 3443 |
| 7 | BIDAR | 1871 | 1441 | 1845 | 5157 |
| 8 | CHAMARAJANAGAR | 940 | 700 | 800 | 2440 |
| 9 | CHIKKABALLAPURA | 1574 | 1166 | 927 | 3667 |
| 10 | CHIKKAMANGALORE | 1605 | 1197 | 1229 | 4031 |
| 11 | CHIKKODI | 2580 | 1811 | 2598 | 6989 |
| 12 | CHITRADURGA | 2128 | 1636 | 1795 | 5559 |
| 13 | DAKSHINA KANNADA | 1181 | 843 | 1246 | 3270 |
| 14 | DAVANAGERE | 1961 | 1527 | 1769 | 5257 |
| 15 | DHARWAD | 1444 | 1136 | 1701 | 4281 |
| 16 | GADAG | 1113 | 871 | 1233 | 3217 |
| 17 | HASSAN | 2397 | 1833 | 1536 | 5766 |
| 18 | HAVERI | 1881 | 1449 | 1883 | 5213 |
| 19 | KALABURAGI | 2714 | 2000 | 2546 | 7260 |
| 20 | KODAGU | 473 | 306 | 467 | 1246 |
| 21 | KOLAR | 2030 | 1568 | 1119 | 4717 |
| 22 | KOPPAL | 1620 | 1220 | 1679 | 4519 |
| 23 | MADHUGIRI | 1404 | 1094 | 932 | 3430 |
| 24 | MANDYA | 1731 | 1164 | 1205 | 4100 |
| 25 | MYSURU | 2340 | 1834 | 1890 | 6064 |
| 26 | RAICHUR | 2261 | 1628 | 2093 | 5982 |
| 27 | RAMANAGARA | 1335 | 941 | 736 | 3012 |
| 28 | SHIVAMOGGA | 2204 | 1625 | 1775 | 5604 |
| 29 | SIRSI | 1328 | 941 | 1075 | 3344 |
| 30 | TUMKUR | 2217 | 1809 | 1301 | 5327 |
| 31 | UDUPI | 745 | 570 | 705 | 2020 |
| 32 | UTTARKANNADA | 1092 | 850 | 851 | 2793 |
| 33 | VIJAYAPURA | 2996 | 2301 | 2904 | 8201 |
| 34 | YADAGIRI | 1263 | 865 | 936 | 3064 |
| TOTAL | | 58362 | 43874 | 50497 | 152733 |

D:\p4comp39\Y-20-21\NISHTHA\TARGET for the year 2020-21 PRIMARY

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬನಶಂಕರಿ 3ನೇ ಹಂತ, ಬೆಂಗಳೂರು – 560085

ಅನುಬಂಧ - 2

ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377
ಡಿಎಸ್ಇಆರ್‌ಟಿ DSERT

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ನಿಷ್ಠಾ/ಪ್ರಾ.ಶಾ.ಶಿ.ತ/05/2020-21 ದಿನಾಂಕ 13.10.2020

**ಜ್ಞಾಪನ**

**ವಿಷಯ : ನಿಷ್ಠಾ ಆನ್‌ಲೈನ್ ತರಬೇತಿಯಲ್ಲಿ ವಿವಿಧ ಹಂತದ ಅಧಿಕಾರಿಗಳು & ಸಮಿತಿಯ ಪಾತ್ರ ಮತ್ತು ಜವಾಬ್ದಾರಿಗಳು.**

*****

ನಿಷ್ಠಾ ಆನ್‌ಲೈನ್ ತರಬೇತಿಯು ಅತ್ಯಂತ ಮಹತ್ವವಾದ ತರಬೇತಿ ಕಾರ್ಯಕ್ರಮವಾಗಿದ್ದು ರಾಷ್ಟ್ರಾದ್ಯಂತ ಏಕಸ್ವರೂಪದಲ್ಲಿ ಎಲ್ಲಾ ಶಿಕ್ಷಕರನ್ನು ತಲುಪಲಿದೆ. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ರಾಷ್ಟದಲ್ಲಿಯೇ ಮುಂಚೂಣಿಯಲ್ಲಿರುವ ಕರ್ನಾಟಕವು ಹಲವಾರು ಉಪಕ್ರಮಗಳನ್ನು ಜಾರಿಗೆ ತರುತ್ತಿದೆ.

ಈ ಕಾರ್ಯಕ್ರಮವು ತನ್ನ ಸ್ವರೂಪಕ್ಕೆ ಅನುಗುಣವಾಗಿ ಅನುಷ್ಠಾನವಾಗಲು ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳು ಕೈಜೋಡಿಸಬೇಕಿದೆ. ಈ ನಿಟ್ಟಿನಲ್ಲಿ ವಿವಿಧ ಅಧಿಕಾರಿಗಳಿಗೆ ವಿವಿಧ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಲಾಗಿದೆ.

## ಸಿ.ಆರ್.ಪಿ ಗಳ ಪಾತ್ರ ಮತ್ತು ಜವಾಬ್ದಾರಿ :

ಶಿಕ್ಷಕರ ವೃತ್ತಿಪರ ಬೆಳವಣಿಗೆಯ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ವಹಿಸುವ ಹುದ್ದೆಯೆಂದರೆ ಸಿಆರ್.ಪಿ ಗಳದ್ದು. ಇಲ್ಲಿ ಶೈಕ್ಷಣಿಕ ಬೆಂಬಲಿಗರಾಗಿ ಶಿಕ್ಷಕರಿಗೆ ಸಹಕರಿಸಲು ಅನುಕೂಲವಾಗುವಂತೆ ಕೆಲವು ಮಾಹಿತಿಗಳನ್ನು ವಿವರಿಸಿದೆ.

1. ಪ್ರತಿ ಶಾಲೆಯ ಮುಖ್ಯ ಶಿಕ್ಷಕರ ಹತ್ತಿರ ಆ ಶಾಲೆಯ ಎಲ್ಲ ಶಿಕ್ಷಕರ ನಿಷ್ಠಾ ತರಬೇತಿಯ ಪ್ರಗತಿ ವಿವರಗಳನ್ನು ದಾಖಲಿಸುವಂತೆ ಸೂಚಿಸಿ ಅವರಿಂದ ಮಾಹಿತಿಯನ್ನು ಕಾಲ ಕಾಲಿಕವಾಗಿ ಪಡೆಯುತ್ತಾ ಅಗತ್ಯವಿರುವ ಶಿಕ್ಷಕರಿಗೆ ಸೂಕ್ತ ತಾಂತ್ರಿಕ ಬೆಂಬಲಗಳನ್ನು ಒದಗಿಸಿ ಯಶಸ್ವಿಯಾಗಿ ಶಿಕ್ಷಕರು ಪೂರ್ಣತರಬೇತಿಯನ್ನು ಹೊಂದುವಂತೆ ಕ್ರಮ ವಹಿಸುವುದು.
2. ಕ್ಲಸ್ಟರ್ ಹಂತದಲ್ಲಿ ಪರಿಹಾರವಾಗದ ತಾಂತ್ರಿಕ ಸಮಸ್ಯೆಗಳನ್ನು ಬ್ಲಾಕ್ ಹಂತದ ಪ್ರೋಗ್ರಾಮರ್ ಸಹಾಯದಿಂದ ಬಗೆಹರಿಸಲು ಪ್ರಯತ್ನಿಸುವುದು.
3. ಬಿ.ಆರ್.ಸಿ ರವರ ಮುಖಾಂತರ ಬ್ಲಾಕ್ ಹಂತದಲ್ಲಿಯೂ ಪರಿಹಾರವಾಗದ ತಾಂತ್ರಿಕ ಸಮಸ್ಯೆಗಳನ್ನು ಜಿಲ್ಲಾ ಹಂತದ ಪ್ರೋಗ್ರಾಮರ್ ತಂಡದಲ್ಲಿ ಬಗೆಹರಿಸಲು ಕ್ರಮ ವಹಿಸುವುದು.
4. ತಮ್ಮ ಕ್ಲಸ್ಟರ್ ವ್ಯಾಪ್ತಿಯ ಯಾವ ಶಿಕ್ಷಕರೂ ನಿಷ್ಠಾ ಆನ್‌ಲೈನ್ ತರಬೇತಿಯಲ್ಲಿ ನೋಂದಣಿಯಾಗದೆ ಉಳಿಯದಂತೆ ಕ್ರಮ ವಹಿಸುವುದು ಹಾಗೂ ಸರಿಯಾದ ವೇಗದಲ್ಲಿ ತರಬೇತಿಯ ಎಲ್ಲ ಚಟುವಟಿಕೆಗಳನ್ನು ಪೂರ್ಣಗೊಳಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
5. ಸ್ಮಾರ್ಟ್‌ಫೋನ್ ಹೊಂದಿರದ ಅಥವಾ ಬಳಸಲು ಬಾರದಿರುವ ಶಿಕ್ಷಕರು ಕ್ಲಸ್ಟರ್ ವ್ಯಾಪ್ತಿಯಲ್ಲಿ ಇದ್ದಲ್ಲಿ ಅವರಿಗೆ ಪೀರ್‌ಗ್ರೂಪ್ ಬೆಂಬಲವನ್ನು ಒದಗಿಸಲು ಕ್ರಮ ವಹಿಸುವುದು .ಇಂತಹ ಶಿಕ್ಷಕರ ಶಾಲೆಗಳಿಗೆ ಅಥವಾ ಶಿಕ್ಷಕರಿರುವ ಸ್ಥಳಕ್ಕೆ ಭೇಟಿ ನೀಡಿ ಅವರಿಗೆ ಈ ತರಬೇತಿಯ ಕೆಲವು ವಿಚಾರಗಳನ್ನು ಕೆ.ಆರ್.ಪಿಯೊಂದಿಗೆ ಸೇರಿ ಚರ್ಚಿಸುವುದು ಮತ್ತು ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದು. ಇಲಾಖೆಯಿಂದ ಸರಬರಾಜಾಗುವ ನಿಷ್ಠಾ ತರಬೇತಿ ಕೈಪಿಡಿಯ ಶಿಕ್ಷಕರ ಪ್ರತಿಗಳನ್ನು ಪ್ರತಿಯೊಬ್ಬ ಶಿಕ್ಷಕರಿಗೆ ಹಾಗೂ ನಾಯಕತ್ವದ ಮಾಡ್ಯೂಲ್ ಪ್ರತಿಯನ್ನು ಪ್ರತಿ ಶಾಲೆಗೆ ಒಂದರಂತೆ ವಿತರಿಸುವುದು.
6. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಬಿ.ಆರ್.ಸಿಗೆ ಸಲ್ಲಿಸುವುದು.
7. ಇನ್ನುಳಿದಂತೆ ಸಾಕಷ್ಟು ವಿಚಾರಗಳನ್ನು ತಮ್ಮ ವ್ಯಾಪ್ತಿಯ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರೊಂದಿಗೆ ಚರ್ಚಿಸುತ್ತಾ ತರಬೇತಿಯ ಅನುಷ್ಠಾನದಲ್ಲಿ ಪೂರ್ಣ ಸಹಕಾರವನ್ನು ನೀಡುವುದು.
8. ಕಾಲಕಾಲಕ್ಕೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

## ಕೆ.ಆರ್.ಪಿಗಳ ಪಾತ್ರ ಮತ್ತು ಜವಾಬ್ದಾರಿ :

1. ಟೆಲಿಗ್ರಾಮ್ ಗ್ರೂಪ್ ರಚಿಸಿ ಶಿಕ್ಷಕರಿಗೆ ಸೂಕ್ತ ತಾಂತ್ರಿಕ ಬೆಂಬಲಗಳನ್ನು ಒದಗಿಸಿ ಯಶಸ್ವಿಯಾಗಿ ಶಿಕ್ಷಕರು ಪೂರ್ಣ ತರಬೇತಿಯನ್ನು ಹೊಂದುವಂತೆ ಕ್ರಮ ವಹಿಸುವುದು. ಇದಕ್ಕೆ ಬ್ಲಾಕ್ ಹಂತದ ಪ್ರೋಗ್ರಾಮರ್ ಸಹಾಯ ಪಡೆಯುವುದು.
2. ತಮಗೆ ಹಂಚಿಕೆಯಾದ ಯಾವ ಶಿಕ್ಷಕರೂ ನಿಷ್ಠಾ ಆನ್‌ಲೈನ್ ತರಬೇತಿಯಲ್ಲಿ ನೋಂದಣಿಯಾಗದೆ ಉಳಿಯದಂತೆ ಕ್ರಮ ವಹಿಸುವುದು ಹಾಗೂ ಸರಿಯಾದ ವೇಗದಲ್ಲಿ ತರಬೇತಿಯ ಎಲ್ಲ ಚಟುವಟಿಕೆಗಳನ್ನು ಪೂರ್ಣಗೊಳಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
3. ಸ್ಮಾರ್ಟ್‌ಫೋನ್ ಹೊಂದಿರದ ಅಥವಾ ಬಳಸಲು ಬಾರದಿರುವ ಶಿಕ್ಷಕರು ತಮ್ಮ ಗ್ರೂಪ್‌ನಲ್ಲಿ ಇದ್ದಲ್ಲಿ ಅವರಿಗೆ ಪೀರ್‌ಗ್ರೂಪ್ ಬೆಂಬಲವನ್ನು ಒದಗಿಸಲು ಕ್ರಮ ವಹಿಸುವುದು. ಇಂತಹ ಶಿಕ್ಷಕರ ಶಾಲೆಗಳಿಗೆ ಅಥವಾ ಶಿಕ್ಷಕರಿರುವ ಸ್ಥಳಕ್ಕೆ ಸಿ.ಆರ್.ಪಿ ರವರು ಭೇಟಿ ನೀಡಿ ಇಲಾಖೆಯಿಂದ ಸರಬರಾಜಾಗುವ ನಿಷ್ಠಾ ತರಬೇತಿ ಕೈಪಿಡಿಯ ಶಿಕ್ಷಕರ ಪ್ರತಿಗಳನ್ನು ಪ್ರತಿಯೊಬ್ಬ ಶಿಕ್ಷಕರಿಗೆ ಹಾಗೂ ನಾಯಕತ್ವದ ಮಾಡ್ಯೂಲ್ ಪ್ರತಿಯನ್ನು ಪ್ರತಿ ಶಾಲೆಗೆ ಒಂದರಂತೆ ವಿತರಣೆಯಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು. ತರಬೇತಿಯ ವಿಚಾರಗಳನ್ನು ಸಿ.ಆರ್.ಪಿ ಯೊಂದಿಗೆ ಚರ್ಚಿಸುವುದು ಮತ್ತು ಚರ್ಚೆಯಲ್ಲಿ ಅವರು ಪಾಲ್ಗೊಳ್ಳುವಂತೆ ಮಾಡುವುದು .
4. ಕೋರ್ಸ್‌ವಾರು ಆನ್‌ಲೈನ್–ವೆಬಿನಾರ ವಿಷಯಗಳನ್ನು ತಮ್ಮ ಟೆಲಿಗ್ರಾಮ್ ಗ್ರೂಪ್‌ನಲ್ಲಿ ಹಂಚಿಕೆ ಮಾಡಿಕೊಂಡು ಶಿಕ್ಷಕರು ಕೋರ್ಸ್ ಪೂರ್ಣಗೊಳಿಸಲು ಅಗತ್ಯ ಬೆಂಬಲ ನೀಡುವುದು. ಕೆ.ಆರ್.ಪಿ ಹಂತದಲ್ಲಿ ಹೆಚ್ಚಿನ ಅಗತ್ಯತೆ ಇರುವ ಅಂಶಗಳಿಗೆ ಆನ್‌ಲೈನ್ –ವೆಬಿನಾಡಿಜಿ ಆಯೋಜಿಸುವುದು. ಇದಕ್ಕೆ ಎಸ್.ಆರ್.ಜಿಯನ್ನು ಬಳಸಿಕೊಳ್ಳಬಹುದು.
5. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಎಸ್.ಆರ್.ಪಿ–ಎಲ್ ರವರಿಗೆ ಸಲ್ಲಿಸುವುದು.
6. ಕಾಲಕಾಲಕ್ಕೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು.

## Block level technical and Implementation Committee ಪಾತ್ರ ಮತ್ತು ಜವಾಬ್ದಾರಿ

1. ಬಿ.ಆರ್.ಪಿಗಳು ತಮ್ಮ ಉಸ್ತುವಾರಿಯ ಹೋಬಳಿಯ ಎಲ್ಲಾ ಶಿಕ್ಷಕರು ಈ ತರಬೇತಿಗೆ ನೋಂದಣಿ ಆಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು . ಈ ಕಾರ್ಯಕ್ಕೆ ಇ.ಸಿ.ಓಗಳು ಸಹಕರಿಸುವುದು.
2. ಅತಿ ಕಡಿಮೆ ನೋಂದಣಿಯಾಗಿರುವ ಕ್ಲಸ್ಟರ್‌ನ ಸಿ.ಆರ್.ಪಿ ಹಾಗೂ ಅಲ್ಲಿನ ಶಿಕ್ಷಕರ ಜೊತೆ ಮ್ಯಾಪ್ ಆಗಿರುವ ಕೆ.ಆರ್.ಪಿಗಳ ಜೊತೆ ಆಗಾಗ್ಗೆ ಚರ್ಚಿಸುತ್ತಾ ಅತಿ ಶೀಘ್ರದಲ್ಲಿ ಪ್ರಗತಿ ಸಾಧಿಸಬೇಕು.
3. ಬಿಆರ್.ಪಿಗಳು ಕೂಡ ಈ ಕೋರ್ಸ್‌ನಲ್ಲಿ ನೋಂದಣಿಯಾಗಿ ಈ ಕೋರ್ಸ್‌ಅನ್ನು ಪೂರ್ಣಗೊಳಿಸಿ ಅದರಲ್ಲಿ ಇರತಕ್ಕಂತಹ ಅಂಶಗಳನ್ನು ಮನನ ಮಾಡಿಕೊಳ್ಳಬೇಕು.
4. ಕೆ.ಆರ್.ಪಿ ಮತ್ತು ಶಿಕ್ಷಕರಿಗೆ ಈ ಕೋರ್ಸ್ ನ ಶೈಕ್ಷಣಿಕ ಮಾಹಿತಿಯನ್ನು ಒದಗಿಸುತ್ತ ಅವರ ಜೊತೆ ಚರ್ಚೆಗಳಲ್ಲಿ ಪಾಲ್ಗೊಂಡು ಅವರು ಸರಿಯಾದ ಮಾರ್ಗದಲ್ಲಿ ವಿಷಯಗಳನ್ನು ಗ್ರಹಿಸುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು .
5. ಬ್ಲಾಕ್ ಹಂತದ ಅಸೆಸ್ಮೆಂಟ್ ಪರೀಕ್ಷೆಗಳಲ್ಲಿನ ಸಾಧನೆಯ ಹಿನ್ನೆಲೆಯಲ್ಲಿ ವಿವಿಧ ಪೇಡಾಗಜಿಗಳಲ್ಲಿ ಚರ್ಚೆಯ ಅಂಶಗಳನ್ನು ಗುರುತಿಸಿ ಅದು ಮತ್ತು ನಿಷ್ಠಾ ತರಬೇತಿಗೆ ಇರುವ ನೇರ ಸಂಬಂಧವನ್ನು ಶಿಕ್ಷಕರಿಗೆ ಸ್ಪಷ್ಟಪಡಿಸಬೇಕು. ಈ ಸಂಬಂಧ ಸಣ್ಣ ಸಣ್ಣ ವೀಡಿಯೊ ಸಂದೇಶಗಳನ್ನು ಸೃಷ್ಟಿಸಿ ಶಿಕ್ಷಕ ಬಳಗದ ಜೊತೆ ಹಂಚಿಕೊಳ್ಳಬೇಕು. ಸಿ.ಆರ್.ಪಿಗಳಿಂದ ಪ್ರತಿ ವಾರ ಶಿಕ್ಷಕರ ತರಬೇತಿಯ ಪ್ರಗತಿಯನ್ನು ಪಡೆದು ಕ್ರೂಢೀಕರಿಸಿ ಬ್ಲಾಕ್‌ನ ಪ್ರಗತಿಯನ್ನು ಸಿದ್ಧಪಡಿಸಿ ಡಯಟ್ ಜೊತೆ ಹಂಚಿಕೊಳ್ಳಬೇಕು.
6. ಬ್ಲಾಕ್ ಹಂತದಲ್ಲಿ ಮುಖ್ಯವಾಗಿ ಈ ಎಲ್ಲಾ ತರಬೇತಿಗಳ ಪೂರ್ಣ ಜವಾಬ್ದಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ. ಬಿ.ಆರ್.ಸಿ ರವರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಈ ಕಾರ್ಯದಲ್ಲಿ ಪೂರ್ಣ ಸಹಕಾರವನ್ನು ನೀಡಬೇಕು.
7. ಇವರಿಬ್ಬರ ನೇತೃತ್ವದಲ್ಲಿ ಮಾಹೆವಾರು ಶಿಕ್ಷಕರ ತರಬೇತಿಯ ಪ್ರಗತಿ ಹಾಗೂ ಕೋರ್ಸ್‌ಗಳನ್ನು ಪೂರ್ಣಗೊಳಿಸುತ್ತಿರುವ ದತ್ತಾಂಶಗಳನ್ನು ವಿಶ್ಲೇಷಿಸಿ ಸೂಕ್ತ ಮಾರ್ಗದರ್ಶನವನ್ನು ಸಿಆರ್.ಪಿಗಳು ಹಾಗೂ ಬ್ಲಾಕಿನ ಕೆ.ಆರ್.ಪಿ ಗಳಿಗೆ ನೀಡಬೇಕು.
8. ಯಾವುದಾದರೂ ಶಿಕ್ಷಕರು ತಾಂತ್ರಿಕ ಸಮಸ್ಯೆಗಳಿಂದ ಈ ಕೋರ್ಸಿಗೆ ಜಾಯಿನ್ ಆಗಲು ಆಗಿಲ್ಲವೆಂದರೆ, ತಕ್ಷಣ ಕೆ.ಆರ್.ಪಿ ಹಾಗೂ ತಮ್ಮ ಬ್ಲಾಕ್ ಹಂತದ ಪ್ರೋಗ್ರಾಮರ್ ಗಳಿಂದ ತಾಂತ್ರಿಕ ನೆರವನ್ನು ಒದಗಿಸಬೇಕು. ಇದರಲ್ಲಿ TALP ಸಂಪನ್ಮೂಲ ವ್ಯಕ್ತಿಗಳ ಸಹಾಯವನ್ನು ಕೂಡ ಪಡೆಯಬಹುದು.

9. ಶಿಕ್ಷಕರಿಗೆ ಈ ಕೋರ್ಸ್‌ಅನ್ನು ತೆಗೆದುಕೊಳ್ಳಲು ಹಾಗೂ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉತ್ತೇಜನವನ್ನು ನೀಡಬೇಕು
10. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಡಯಟ್ ನೋಡಲ್ ಅಧಿಕಾರಿಗೆ ಸಲ್ಲಿಸುವುದು.
11. ಕಾಲಕಾಲಕ್ಕೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು

**District level technical and implementation committee ಪಾತ್ರ ಮತ್ತು ಜವಾಬ್ದಾರಿ.**

1. ನಿಷ್ಠಾ ಆನ್ ಲೈನ್‌ತರಬೇತಿಗೆ ಸಂಬಂಧಿಸಿದಂತೆ ಉಪನಿರ್ದೇಶಕರು(ಆಡಳಿತ) ರವರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು ಅವರಿಗೆ ಇದರ ಪ್ರಗತಿ ಸಾಧನೆಯ ಜವಾಬ್ದಾರಿವಹಿಸಿದೆ. ಕಾಲಕಾಲಕ್ಕೆ ಪ್ರಗತಿಯನ್ನು ಸಿ.ಟಿ.ಇಗಳ ಮೂಲಕ ಮಾಡಲಾಗುವುದು. ಉಪನಿರ್ದೇಶಕರು(ಅಭಿವೃದ್ಧಿ)ರವರ ಸಹಯೋಗದಲ್ಲಿ ಪೂರ್ಣಗುರಿ ಸಾಧಿಸುವುದು.
2. ಜಿಲ್ಲಾ ಮತ್ತು ಬ್ಲಾಕ್ ಹಂತದಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಬೇಕಾದ ಎಲ್ಲಾ ರೀತಿಯ ತಾಂತ್ರಿಕ ಬೆಂಬಲ ಮತ್ತು ಆಡಳಿತಾತ್ಮಕ ಬೆಂಬಲವನ್ನು ನೀಡುವುದು. ತರಬೇತಿ ಅನುಷ್ಠಾನದ ಸಂದರ್ಭದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಲು ತಮ್ಮದೇ ಕಛೇರಿಯ ಕಂಪ್ಯೂಟರ್ ಪ್ರೋಗ್ರಾಮರ್‌ರವರ ಸಹಕಾರ ಪಡೆದು ಉಪನಿರ್ದೇಶಕರು(ಆಡಳಿತ)ರವರು ಕ್ರಮವಹಿಸುವುದು.
3. ಡಯಟ್‌ನ ವಿಷಯವಾರು ಸಂಪನ್ಮೂಲ ಅಧಿಕಾರಿಗಳು ಹಾಗೂ ಜಿಲ್ಲಾ ಹಂತದ ತಾಂತ್ರಿಕ ತಂಡದ ಸದಸ್ಯರು ಡಯಟ್ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನ ಮತ್ತು ತಾಂತ್ರಿಕ ಬೆಂಬಲ ನೀಡುವುದು.
4. ಬ್ಲಾಕ್ ಹಂತದಿಂದ ಬರುವ ತಾಂತ್ರಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು.
5. ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ ಪ್ರಗತಿ ಪರಿಶೀಲಿಸುವುದು.
6. ಆನ್‌ಲೈನ್ ತರಬೇತಿಗೆ ಬೆಂಬಲವಾಗಿ ಆಯ್ದ ಕೆ.ಆರ್.ಪಿ & ಎಸ್.ಆರ್.ಪಿ-ಎಲ್ ಗಳ ಮೂಲಕ 15 ದಿನಗಳಿಗೆ ಕನಿಷ್ಠ 3 ವೆಬಿನಾರ್ / ಲೈವ್ ಆನ್‌ಲೈನ್ ತರಗತಿಗಳನ್ನು ಆಯೋಜಿಸುವುದು
7. ಕಾಲಕಾಲಕ್ಕೆ ಸೂಚಿಸಿದ ಇನ್ನಿತರೆ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು

**ಸಿ.ಟಿ.ಇ ಚಿತ್ರದುರ್ಗ& ಸಿ.ಟಿ.ಇ ಮೈಸೂರುರವರ ಪಾತ್ರ ಮತ್ತು ಜವಾಬ್ದಾರಿ.**

**ನಿಷ್ಠಾ ಸ್ಟೇಟ್ ಕೊ-ಆರ್ಡಿನೇಟರ್‌ಗಳು**

A. ಸಿ.ಟಿ.ಇ ಮೈಸೂರುರವರಿಗೆ – ಮೈಸೂರು & ಬೆಳಗಾವಿ ವಿಭಾಗ

B. ಸಿ.ಟಿ.ಇ ಚಿತ್ರದುರ್ಗದವರಿಗೆ – ಬೆಂಗಳೂರು & ಕಲಬುರಗಿ ವಿಭಾಗ ಹಂಚಿಕೆ ಮಾಡಲಾಗಿದೆ.

1. ಸಿ.ಟಿ.ಇ ಯ ವಿವಿಧ ಅಧಿಕಾರಿಗಳು ಮತ್ತು ವಿಷಯ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿಭಾಗ ಹಂತದ ತಾಂತ್ರಿಕ ತಂಡದ ಸದಸ್ಯರು ಸಿ.ಟಿ.ಇ ಹಂತದಲ್ಲಿ ಕಾರ್ಯಕ್ರಮ ಅನುಷ್ಠಾನ ಮತ್ತು ತಾಂತ್ರಿಕ ಬೆಂಬಲ ನೀಡುವುದು.
2. ಪ್ರತಿ ಕೋರ್ಸ್‌ನ ಅನುವಾದಕಾರರು & ಸಿ.ಟಿ.ಇ ಉಪನ್ಯಾಸಕರ ತಂಡದಿಂದ ಜಿಲ್ಲಾ ಹಂತದಿಂದ ಬರುವ ತಾಂತ್ರಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದು.
3. ತಮ್ಮ ವ್ಯಾಪ್ತಿಯ ಜಿಲ್ಲೆಗಳ ಪ್ರತಿ ಮಾಹೆಯ ಪ್ರಗತಿ ಪರಿಶೀಲಿಸುವುದು.
4. ತರಬೇತಿ ಪ್ರಗತಿಯನ್ನು ನಿಗದಿತ ದಿನಾಂಕದೊಳಗೆ ಡಿ.ಎಸ್.ಇ.ಆರ್.ಟಿಗೆ ಸಲ್ಲಿಸುವುದು.
5. ಕಾಲಕಾಲಕ್ಕೆ ಸೂಚಿಸಿದ ಪಾತ್ರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ತರಬೇತಿಯ ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕು

ಸಹಿ/- 14/10
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು-8 13/10/20

D:\p4comp39\Y-20-21\Letter.docx

ಗೆ,

1) ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
3) ಪ್ರಾಂಶುಪಾಲರು ಸಿ.ಟಿ.ಇ ಚಿತ್ರದುರ್ಗ ಮತ್ತು ಮೈಸೂರು ರವರಿಗೆ ಮುಂದಿನ ಕ್ರಮಕ್ಕಾಗಿ.

ಪ್ರತಿಯನ್ನು:-

1. ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು ಸಾ.ಶಿ.ಇಲಾಖೆ, ಆಯುಕ್ತಾಲಯ, ಧಾರವಾಡ, ಕಲಬುರುಗಿ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

D:\p4comp39\Y-20-21\Letter.docx

ಅನುಬಂಧ-03

## ಫ್ಲೋಚಾರ್ಟ್ (FLOW CHART)

### ಪ್ರಾಥಮಿಕ ಶಾಲಾ ಶಿಕ್ಷಕರ ನಿಷ್ಠಾ ಆನ್‌ಲೈನ್ ತರಬೇತಿಯ ಲಾಗಿನ್ ಪ್ರಕ್ರಿಯೆ

**(ಪ್ರಾಥಮಿಕ ಶಾಲಾ ಶಿಕ್ಷಕರು ಈ ಮುಂದಿನ ಹಂತಗಳನ್ನು ಅನುಸರಿಸಿ ನಿಷ್ಠಾ ಆನ್‌ಲೈನ್ ತರಬೇತಿಯನ್ನು ಪೂರ್ಣಗೊಳಿಸುವುದು)**

**ಹಂತ: 1 –** ನಿಮ್ಮ ಮೊಬೈಲ್‌ನಲ್ಲಿ ಗೂಗಲ್‌ಕ್ರೋಮ್ ಬ್ರೌಸರ್ ಅನ್ನು ಓಪನ್ ಮಾಡಿ.

**ಹಂತ:2 –** ಬ್ರೌಸರ್‌ನ ಅಡ್ರೆಸ್ ಬಾರ್‌ನಲ್ಲಿ **www.schooleducation.kar.nic.in** ಈ ವಿಳಾಸವನ್ನು ದಾಖಲಿಸಿ ಪ್ರವೇಶ ಪಡೆಯಿರಿ.

**ಹಂತ: 3 –** 'ಇಲಾಖಾ ತಂತ್ರಾಂಶಗಳ ಲಿಂಕ್'ಗಳ ಕೆಳಗೆ ಇರುವ **'ಶಿಕ್ಷಕರ ತರಬೇತಿ ಮತ್ತು ವರ್ಗಾವಣಾ ತಂತ್ರಾಂಶ'** ಇದನ್ನು ಕ್ಲಿಕ್ ಮಾಡಿ.

**ಹಂತ: 4 – ಟೀಚರ್ ಪೋರ್ಟಲ್** ಅನ್ನು ಕ್ಲಿಕ್ ಮಾಡಿ.

**ಹಂತ: 5 –** ನಿಮ್ಮ ಯೂಸರ್ ಐಡಿಯು ನಿಮ್ಮ **ಕೆ.ಜಿ.ಐ.ಡಿ ಸಂಖ್ಯೆ**ಯಾಗಿದ್ದು ಅದನ್ನು ನಮೂದಿಸಿ ನಿಮ್ಮ ಪಾಸ್ವರ್ಡ್ ನೆನಪಿದ್ದಲ್ಲಿ ಅದನ್ನು ದಾಖಲಿಸಿ ಅಥವಾ ಮರೆತಿದ್ದಲ್ಲಿ ಸೆಟ್ ಪಾಸ್ವರ್ಡ್ ಮೂಲಕ ಹೊಸದಾಗಿ ಸೃಜಿಸಿಕೊಳ್ಳಿ.

**ಹಂತ: 6 –** ದೀಕ್ಷಾ ಪೋರ್ಟಲ್‌ನಲ್ಲಿ ಕೇಳಲಾಗುವ **ನಿಮ್ಮ ಮೊಬೈಲ್ ಸಂಖ್ಯೆ** ಅಥವಾ **ಇ-ಮೇಲ್ ಐಡಿ** ಅನ್ನು ಕೊಟ್ಟು ಮುಂದುವರೆಯಿರಿ.

**ಹಂತ: 7 – ಕೋರ್ಸ್** ಟ್ಯಾಬ್ ಅನ್ನು ಕ್ಲಿಕ್ ಮಾಡಿ.

**ಹಂತ: 8 – My State Course** ಅನ್ನು ಆಯ್ಕೆ ಮಾಡಿಕೊಂಡು ಲಭ್ಯವಿರುವ ಕೋರ್ಸ್‌ಗಳನ್ನು ಕನ್ನಡ ಅಥವಾ ಆಂಗ್ಲ ಮಾಧ್ಯಮದಲ್ಲಿ ಆಯ್ಕೆ ಮಾಡಿಕೊಳ್ಳಿ.

**ಹಂತ: 9 –** ಕೋರ್ಸ್‌ನಲ್ಲಿ ಲಭ್ಯವಿರುವ **ಪಠ್ಯಗಳನ್ನು** ಪೂರ್ಣವಾಗಿ ಓದಿ, **ವೀಡಿಯೋಗಳನ್ನು** ಗಮನವಿಟ್ಟು ವೀಕ್ಷಿಸಿ ಮತ್ತು **ಇಂಟರ್‍ಯಾಕ್ಟಿವ್** (ಕ್ವಿಜ್, ಜಂಬಲ್ ವರ್ಡ್ಸ್, ಡ್ರ್ಯಾಗ್ & ಡ್ರಾಪ್ ಇತ್ಯಾದಿ)ಗಳನ್ನು ಪೂರ್ಣಗೊಳಿಸಿ.

**ಹಂತ: 10 –** ಕೋರ್ಸ್‌ಗಳ ಕೊನೆಯಲ್ಲಿ ನಿಗದಿಪಡಿಸಿರುವ **ಕ್ವಿಜ್‌ನ ಪ್ರಶ್ನೆಗಳಿಗೆ** ಸರಿಯಾಗಿ ಉತ್ತರಿಸಿದ್ದಲ್ಲಿ ಕೋರ್ಸ್‌ಅನ್ನು ಪೂರ್ಣಗೊಳಿದ ಬಗ್ಗೆ ಪ್ರಮಾಣ ಪತ್ರ ಜನರೇಟ್ ಆಗುತ್ತದೆ.

- ಇದೇ ರೀತಿ ಎಲ್ಲಾ 18 ಕೋರ್ಸ್‌ಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವುದು.
- 18 ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಎನ್.ಸಿ.ಇ.ಆರ್.ಟಿ ನಿಗದಿಪಡಿಸಿದ ಅಸೆಸ್‌ಮೆಂಟ್‌ನಲ್ಲಿ ಭಾಗವಹಿಸಿ **'ಸರ್ಟಿಫಿಕೇಟ್ ಆಫ್ ಮೆರಿಟ್'** ಪಡೆದುಕೊಳ್ಳುವುದು.
- ಕೋರ್ಸ್‌ಅನ್ನು ಪೂರ್ಣಗೊಳಿಸುವ ಸಮಯದಲ್ಲಿ ಬರುವ ತಾಂತ್ರಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ನಿಮ್ಮ ಕೆ.ಆರ್.ಪಿ ಮತ್ತು ಬಿ.ಆರ್.ಸಿ ರವರನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳುವುದು. ಅವರು ಆಯೋಜಿಸುವ ಬೆಂಬಲ ಆಧಾರಿತ ಆನ್‌ಲೈನ್ ತರಗತಿಗಳಲ್ಲಿ ಭಾಗವಹಿಸುವುದು.

ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬನಶಂಕರಿ 3ನೇ ಹಂತ, ಬೆಂಗಳೂರು – 560085

ಅನುಬಂಧ-4

Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377

# SCHEDULE FOR NISHTHA ONLINE TRAINING ON DIKSHA

| Duration of the Course | Course Details |
|---|---|
| **Nov 3 - 15, 2020**<br>**(3 Courses)** | **Course 1** - Curriculum and Inclusive Classrooms<br>**Course 2** - Developing Personal -Social Qualities for Creating Safe and Healthy School Environment<br>**Course 3** - Health and Well-being in Schools |
| **Nov 16 - 30, 2020**<br>**(3 Courses)** | **Course 4** - Integrating Gender In Teaching Learning Process<br>**Course 5** - Integration of ICT in Teaching-Learning and Assessment<br>**Course 6** - Art Integrated Learning |
| **Dec 1-15, 2020**<br>**(3 courses)** | **Course 7** - School Based Assessment<br>**Course 8** - Pedagogy of Environmental Studies (Primary Stage)<br>**Course 9** - Pedagogy of Mathematics |
| **Dec 16-31, 2020**<br>**(3 courses)** | **Course 10** - Pedagogy of Social Sciences (Upper Primary Stage)<br>**Course 11** - Pedagogy of Languages<br>**Course 12** - Pedagogy of Science (Upper Primary Stage) |
| **Jan 1- 15, 2021**<br>**(3 courses)** | **Course 13** - School Leadership : Concepts and Application<br>**Course 14** - Initiatives in School Education<br>**Course 15** - Pre-School Education |
| **Jan 16- 31, 2021**<br>**(3 courses)** | **Course 16** - Pre-Vocational Education<br>**Course 17** - Covid-19 Scenario: Addressing Challenges in School Education<br>**Course 18** - Understanding Rights, Child Sexual Abuse (CSA) and The Protection Of Children from Sexual Offences (POCSO) Act, 2012 |
| **Feb 1-15, 2021**<br>**(All courses)** | All 18 modules for teachers who missed any of these modules.<br>Competency Based Assesment – Certificate of merit will be issued only if the teacher scores 50% and above. |

(M.R.MARUTHI)
DIRECTOR DSERT
BANGALORE